## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.401/2018

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಮಂಜಮ್ಮ | ಸಿಡಬ್ಲ್ಯೂ-03 |
| ತಂದೆಯ ಹೆಸರು | – | ಪಾಪಣ್ಣ | ಪಿಡಬ್ಲ್ಯೂ-02 |
| ವಯಸ್ಸು | – | ಸುಮಾರು 25 ವರ್ಷ | |
| ಉದ್ಯೋಗ | – | ಕೂಲಿ ಕೆಲಸ | |
| ವಾಸ | – | ಚಿಕ್ಕ ಕಾಟಲಹಟ್ಟಿ | |

ದಿನಾಂಕಃ 20.01.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

### ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ

ಚಾಸಾ.1, 2, 4 ರಿಂದ 20 ನನಗೆ ಗೊತ್ತು. ಚಾಸಾ 02 ರವರು ತೀರಿಕೊಂಡಿರುತ್ತಾರೆ. ಸೂರಮ್ಮ ಕೂಡಾ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ನಾವು ಚಿಕ್ಕ ಕಾಟಲಹಟ್ಟಿಯಿಂದ ಮೇಟಿಕುರ್ಕೆಗೆ ಸುಮಾರು 25 ಮಂದಿ ಕಡಲೆ ಗಿಡ ಕೀಳಲು ಹೋಗುತ್ತಿದ್ದೆವು. ಟೆಂಪೂ ನಂ. ನನಗೆ ಗೊತ್ತಿರುವುದಿಲ್ಲ. ಟೆಂಪೂವನ್ನು ಅನಿಲ್ ಚಾಲನೆ ಮಾಡುತ್ತಿದ್ದರು. ಮೇಟಿಕುರ್ಕೆ ಹತ್ತಿರು ಟೆಂಪೂ ಚಾಲಕನು ಜೋರಾಗಿ ಹೋಗಿ ಬಿಳಿಸಿರುತ್ತಾರೆ. ಅಪಘಾತದಿಂದ ನನಗೆ ಕಾಲಿಗೆ ನೋವಾಗಿರುತ್ತದೆ. ಇತರರಿಗೂ ಕೂಡಾ ಗಾಯಗಳಾಗಿರುತ್ತದೆ. ಸೂರಮ್ಮ ಸ್ಥಳದಲ್ಲಿ ತೀರಿಕೊಂಡಿರುತ್ತಾರೆ. ನನ್ನನ್ನು ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಅಪಘಾತ ಆರೋಪಿ ತಪ್ಪಿನಿಂದ ಆಗಿರುತ್ತದೆ. ಪೊಲೀಸ್ ರು ನನ್ನಿಂದ ಹೇಳಿಕೆ ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ಅಪಘಾತ ದಿ 03.02.2018 ಎಂದರೆ ನಿಜ. ವಾಹನ ಸಂಖ್ಯೆ ಕೆ ಎ 16 ಬಿ 7057 ಎಂದರೆ ನಿಜ. ಆರೋಪಿ ಆದಿನ ವಾಹನವನ್ನು ಅತೀ ವೇಗ ಮತ್ತು ಅಜಾಗೂರುಕತೆಯಿಂದ ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಅಪಘಾತ ಆದ ಸಮಯ ಬೆಳಗಿನ ಜಾವ 04.00 ಗಂಟೆ ಆಗಿರುತ್ತದೆ. ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ ಎಲ್ ಎಸ್ ವಕೀಲರಿಂದ–ಏನೂ ಇಲ್ಲ.**

ಅಪಘಾತ ಸಮಯದಲ್ಲಿ ಕತ್ತಲಿತ್ತು ಎಂದರೆ ಸರಿ . ಆ ಸಮಯದಲ್ಲಿ ಒಬ್ಬರ ಮುಖ ಒಬ್ಬರಿಗೆ ಕಾಣುತ್ತಿರಲಿಲ್ಲ ಎಂದರೆ ನಿಜ. ಮೇಟಿಕುರ್ಕೆ ಗ್ರಾಮದಲ್ಲಿ ರಸ್ತೆಗಳು ಸರಿಯಿಲ್ಲ ಎಂದರೆ ನಿಜ. ರಸ್ತೆ ಸರಿಯಿಲ್ಲದಿದ್ದರಿಂದ ವಾಹಗಳನು ನಿದಾನಕ್ಕೆ ಹೋಗುತ್ತವೆ ಎಂದರೆ ನಿಜ. ಆ ದಿನ ಆರೋಪಿಯು ವಾಹನ ಚಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್‌ರಿಗೆ ಟೆಂಪೂ ಗಾಡಿಯಲ್ಲಿ ಹೋಗುತ್ತಿದ್ದೆ ಎಂದು ಹೇಳಿರುತ್ತೇನೆ. ನಾನು ಟಾಟಾ ಮ್ಯಾಜಿಕ್ ವಾಹನದಲ್ಲಿ ಹೋಗುತ್ತಿದ್ದೆ ಎಂದು ಪೊಲೀಸ್‌ರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ, ಪೊಲೀಸ್‌ರಿಗೆ ಹೇಳಿಕೊಟ್ಟ ದಿನಾಂಕ ನನಗೆ ಗೊತ್ತಿರುವುದಿಲ್ಲ. ವಾಹನ ಸಂಖ್ಯೆ ಕೂಡಾ ನನಗೆ ಹೇಳಲು ಬರುವುದಿಲ್ಲ. ನಾನು ಪೊಲೀಸ್‌ರಿಗೆ ಗಾಡಿ ನಂಬರ್ ಹೇಳಿರುವುದಿಲ್ಲ.

ಆ ದಿನ ನಾನು ಕಡಲೆ ಕೀಳಲು ಆರೋಪಿ ಚಾಲನೆ ಮಾಡುತ್ತಿದ್ದ ವಾಹನದಲ್ಲಿ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ವಾಹನವನ್ನು ಅತೀ ವೇಗ ಮತ್ತು ಅಜಾಗುರೂಕತೆಯಿಂದ ಚಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲಲ್ಲ ಎಂದರೆ ಸರಿಯಲ್ಲ. ಪೊಲೀಸ್ ರ ಮಾತು ಕೇಳಿಕೊಂಡು ಸುಳ್ಳು ಸಾಕ್ಶ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು